2. ಪ್ರಜ್ಞಾ 9ನೇ ತರಗತಿಯ ವಿಧ್ಯಾರ್ಥಿನಿ. ಆಕೆ ದಿನನಿತ್ಯ ಶಾಲೆಗೆ ಬಸ್ಸಿನಲ್ಲಿ ಪ್ರಯಾಣಿಸುತ್ತಾಳೆ. ಬಸ್ಸಿನಲ್ಲಿ ಅಂಗವಿಕಲರು, ಮುದುಕ–ಮುದುಕಿಯರನ್ನು ಕಂಡಾಗ ತನ್ನ ಸೀಟನ್ನು ಅವರಿಗೆ ಬಿಟ್ಟು ಕೊಡುತ್ತಿದ್ದಳು. ಆದರೆ ಇತ್ತೀಚಿನ ದಿನಗಳಲ್ಲಿ ಅಂತವರನ್ನು ಬಸ್ಸಿನಲ್ಲಿ ಕಂಡಾಗ ಕಂಡುಕಾಣದಂತೆ ಸೀಟಲ್ಲೆ ಕುಳಿತ್ತಿರುತ್ತಾಳೆ.

**a. i) ಪ್ರಜ್ಞಾಳ ವರ್ತನೆ ಸರಿಯೇ?**

**ii) ಏಕೆ?**

**b. i) ನೀನು ಪ್ರಜ್ಞಾಳಾಗುತ್ತಿದ್ದರೆ ಏನು ಮಾಡುತ್ತಿದ್ದಿ?**

**ii) ಏಕೆ?**

**c. ಇತರರ ಕಷ್ಟಗಳಿಗೆ ನಾವು ಸ್ಪಂದಿಸಬೇಕೇ? ಏಕೆ ?**

3. ಹುಟ್ಟಿದ ಹೆಣ್ಣು ಮಗುವೊಂದನ್ನು ಒಬ್ಬ ತಾಯಿ ರಸ್ತೆ ಬದಿಯಲ್ಲಿರುವ ಕಸದ ತೊಟ್ಟಿಯಲ್ಲಿ ಎಸೆದು ಹೋಗಿದ್ದಾರೆ. ಮುಂಜಾನೆ ಕೆಲವು ಜನರು ಆ ದಾರಿಯಲ್ಲಿ ಮಗುವನ್ನು ನೋಡಿಯೂ ನಿರ್ಲಕ್ಷಿಸಿ ಮುಂದೆ ನಡೆಯುತ್ತಾರೆ.

**a. i) ತಾಯಿ ಮಾಡಿದ ಕೃತ್ಯದ ಬಗ್ಗೆ ನಿನ್ನ ಅಬಿಪ್ರಾಯ?**

**ii) ಈ ಕೃತ್ಯ ಸರೀಯೆ?**

**b. i) ಮಗುವನ್ನು ನಿರ್ಲಕ್ಷಿಸಿದ ಜನರ ಬಗ್ಗೆ ನಿನ್ನ ಅಬಿಪ್ರಾಯ?**

**ii) ಅವರಿಗೆ ನಿನ್ನ ಸಲಹೆ ಏನು?**

**c. i) ಮನುಷ್ಯನ ಜೀವ ಯಾಕೆ ಅಮೂಲ್ಯವಾದುದು?**

**ii) ನೀನು ಕೈಗೊಳ್ಳುವ ಕ್ರಮ, ಪ್ರಾರಂಭಿಕ ಹೆಜ್ಜೆಯ ಬಗ್ಗೆ ನಿರೂಪಿಸು.**

**IX. ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ನಿಮ್ಮ ಸ್ವಂತ ವಾಕ್ಯದಲ್ಲಿ ಉತ್ತರಿಸಿರಿ: 5x1=5**

1. ಪ್ರಸ್ತುತ ವರ್ಷದಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ನೀನು ಕೈಗೊಂಡ ಕ್ರಮಗಳು.
2. ಮಾಧ್ಯಮಾದ ಸದುಪಯೋಗಗಳು ಹಾಗೂ ದುಷ್ಪರಿಣಾಮಗಳು.
3. "ಮನುಷ್ಯನ ಜೀವಕ್ಕೆ ಗೌರವ ನೀಡುವುದು ಮಾನವ ಧರ್ಮ" ವಿವರಿಸು.



# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 11-01-2020** **ಸಮಯ : $2^1/_2$ ಘಂಟೆ**

**ತರಗತಿ : X** **ಅಂಕ : 80**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ: 10x1=10**

1. ಪ್ರತಿಯೊಬ್ಬ ಮಾನವನಿಗೆ ________ ಯಿಂದ ಜಿವಿಸಲು ಮಾನವ ಹಕ್ಕುಗಳು ಅಗತ್ಯ.
(ಘನತೆ; ಗೌರವ; ಸುಖ–ಶಾಂತಿ)
2. ಭಾರತದ ಸಂವಿಧಾನದ ಶಿಲ್ಪಿ ________.
(ಮಹಾತ್ಮಗಾಂಧಿ; ಅಂಬೇಡ್ಕರ್; ಟಾಗೋರ್)
3. ________ ನಮ್ಮ ಆಸ್ತಿ. ಅದನ್ನು ನಮ್ಮಿಂದ ಕಸಿದುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ.
(ಸಮಯ; ಹಣ; ವಿದ್ಯೆ)
4. ಮುಖಂಡ ________ ಮನುಷ್ಯನಾಗಿರಬೇಕು.
(ಆಧ್ಯಾತ್ಮಿಕತೆಯ; ದುಡಿಮೆಯ; ವಿಶಾಲತೆಯ)
5. ನಿಜ ಗೆಳೆತನದ ಅಸ್ತಿಬಾರ ________
(ನಂಬಿಕೆ; ಪ್ರೀತಿ; ಸಹನೆ)
6. ವ್ಯಕ್ತಿ ತನ್ನ ಪರಿಸರವನ್ನು ಪೂರ್ಣಜಾಗೃತಿಯಿಂದ ಅವಲೋಕಿಸುವುದು ________
(ದೀನತೆ; ಗೆಳೆತನ; ಸಂವೇದನಾ–ಶೀಲತೆ)
7. ನಾವು 60 ವರ್ಷ ಬದುಕುವುದಾದರೆ ಸಾಮಾನ್ಯವಾಗಿ ನಮ್ಮ ಸಮಯ ನಿದ್ರೆಗೆ ________ ವರ್ಷ ವ್ಯಯವಾಗುತ್ತದೆ.
(20 ವರ್ಷ; 11 ವರ್ಷ; 8ವರ್ಷ)
8. ಎಲ್ಲರಿಗೂ ಸಿಕ್ಕಿರುವ ಅದ್ಭುತಕರ ಕೊಡುಗೆ ________
(ಗಳಿಕೆಯ ಜನನ; ಜೈವಿಕ ಜನನ; ಪ್ರೇರಿತ ಜನನ)
9. ಸಂತ ಮದರ್ ತೆರೇಜಾರವರಿಗೆ ಭಾರತರತ್ನ ಪ್ರಶಸ್ತಿ ಬಂದ ವರ್ಷ ________
(1975; 1980; 1984)

10. ನಮ್ಮ ____________ ಗಳನ್ನು ಈಡೇರಿಸಿಕೊಳ್ಳಲು ನಾವು ಮಾನವ ಘನತೆಗಾಗಿ ಹಾತೊರೆಯುತ್ತೇವೆ.

(ಆಶೆ–ಅಭಿಲಾಶೆ; ಕುಂದು–ಕೊರತೆ; ಆಶೆ–ನಿರಾಶೆ)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ: 5x1=5**

1. ದೀನತೆ ____________ಗೆ ಪೀಠಿಕೆಯಾಗಿರುತ್ತದೆ.
2. "ಜೀವಂತ ಸಂತ" ಎಂದು ಪ್ರಖ್ಯಾತರಾದವರು ____________.
3. ಟಾಗೋರರ ____________ ಕವನ ಸಂಕಲನ ಅತ್ಯುತ್ತಮ ಸಾಹಿತ್ಯವೆಂದು ನೋಬೆಲ್ ಪ್ರಶಸ್ತಿಯನ್ನು ಗಳಿಸಿತು.
4. ಓದಲು ಸಮಯವಿರಲಿ, ಅದು ____________ ಬುಗ್ಗೆ.
5. ಮಾನವನು ________ ದ ಅವಿಭಾಜ್ಯ ಅಂಗ.

**III. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ: 5x1=5**

1. ಪ್ರಾರ್ಥಿಸುವ ಮೊದಲು : **ಕ್ಷಮಿಸು**:: ಬರೆಯುವ ಮೊದಲು : ________
2. ಭಾರತದ ಸಂವಿಧಾನ : **ಜನವರಿ 26, 1950**:: ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ : ________
3. ಆಧ್ಯಾತ್ಮಿಕತೆ : **ಆಧ್ಯಾತ್ಮಿಕ ಜನನ**:: ದೈಹಿಕ ರಚನೆ : ________
4. ವಾರದ ಬೆಲೆ : **ಸಂಪಾದಕರು** :: ನಿಮಿಷದ ಬೆಲೆ : ________
5. ಆಹಾರ, ವಸತಿ : **ಆರ್ಥಿಕ ಹಕ್ಕುಗಳು** :: ಧರ್ಮದಲ್ಲಿ ನಂಬಿಕೆ : ________

**IV. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ: 5x1=5**

1. ಸಂವೇದನಾ ಶೀಲತೆಯ ಮೂರು ಹಂತಗಳನ್ನು ಬರೆಯಿರಿ.
2. ದೀನತೆಯ ಕೊರತೆಯಿಂದ ಉಂಟಾಗುವ ಪರಿಣಾಮಗಳೇನು?
3. ಗಳಿಕೆಯ ಜನನ ಎಂದರೇನು?
4. ಮುಖಂಡನ ಮೂಲಗಳು ಯಾವುವು?
5. ವೈವಿಧ್ಯತೆಯಲ್ಲಿ ಐಕ್ಯತೆ ಹೇಳಿಕೆಯ ಅರ್ಥವನ್ನು ಕೊಡುವ ಪದಗಳನ್ನು ಬರೆಯಿರಿ.

**V. ಯಾವುದಾದರೂ ಐದು ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ಸಮಯದ ಉಪಯುಕ್ತ ಬಳಕೆಯನ್ನು ಹೇಗೆ ಮಾಡಬಹುದು?
2. ಗೆಳೆತನ ಕಾಪಾಡುವ ನಾಲ್ಕು ಸೂತ್ರಗಳನ್ನು ಕುರಿತು ಬರೆಯಿರಿ.



3. ಮಾನವನ ಹಕ್ಕುಗಳ ಸಾರ್ವತ್ರಿಕ ಘೋಷಣೆಯಲ್ಲಿ ಅಡಕವಾಗಿರುವ ಯಾವುದಾದರೂ 4 ಅಂಶಗಳನ್ನು ಬರೆಯಿರಿ.
4. ಸಂತ ಮದರ್ ತೆರೆಸಾರವರ ಜೀವನದಿಂದ ನಾವು ಏನನ್ನು ಕಲಿತುಕೊಳ್ಳಬಹುದು?
5. ಸಮಯದ ಗುಣಗಳು ಯಾವುವು?
6. ಪರಿಣಾಮಕಾರಿ ಮುಖಂಡನ ಕೆಲಸ ಕಾರ್ಯಗಳು ಯಾವುವು?

**VI. ಯಾವುದಾದರೂ ಆರು ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿರಿ: 6x3=18**

1. ಸಾಮಾಜಿಕ ಪರಿಜ್ಞಾನ ಒಳಗೊಂಡಿರುವ ಅಂಶಗಳು ಯಾವುವು?
2. "ದೀನತೆ ಎಂಬುದು ಒಂದು ಒಳ್ಳೆಯ ಗುಣ" ಐದು ಕಾರಣಗಳನ್ನು ಬರೆಯಿರಿ.
3. "ಅಂಬೇಡ್ಕರ್ ಒಬ್ಬ ಚೇತನ ಪೂರ್ಣ" ವ್ಯಕ್ತಿ ಹೇಗೆ?
4. ವಿವಿಧ ಬಗೆಯ ಹಕ್ಕುಗಳನ್ನು ಕುರಿತು ಬರೆಯಿರಿ.
5. 'ನಮ್ಮ ಸಮಾಜ ವೈವಿಧ್ಯತೆಯ ಸಮಾಜ' ಎಂಬುದನ್ನು ವಿವರಿಸಿ.
6. ಮುಖಂಡನಿಂದ ಅಪೇಕ್ಷಿತ ಆರು ಗುಣಗಳನ್ನು ಬರೆದು ವಿವರಿಸಿ.
7. ಸಂವೇದನಾ ಶೀಲತೆ ಆರೋಗ್ಯಕರ ಸಮುದಾಯಿಕ ಜೀವನಕ್ಕೆ ದಾರಿ ಮಾಡಿಕೊಡುತ್ತದೆ. ಹೇಗೆ?

**VII. ಯಾವುದಾದರೂ ಎರಡು ವಿಷಯಗಳ ಬಗ್ಗೆ ವಿವರಿಸಿ ಬರೆಯಿರಿ: 2x5=10**

1. ಶಾಂತಿಯೇ ನಮ್ಮ ಪ್ರಾರ್ಥನೆ.
2. ಸಮಯ ನಮ್ಮ ಆಸ್ತಿ.
3. ಅತೀವೃಷ್ಠಿ ಮತ್ತು ಅನಾವೃಷ್ಠಿಯ ಪರಿಣಾಮ.

**VIII. ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳಿಗೆ ಪರಿಹಾರ ನೀಡಿರಿ: 2x6=12**

1. ಕಾರ್ತಿಕ್ ಮತ್ತು ಹರೀಶ್ 10ನೇ ತರಗತಿಯ ವಿಧ್ಯಾರ್ಥಿಗಳು ಮನೆಯಲ್ಲಿ ಹರೀಶ್ ಹಠ ಹಿಡಿದು ಮೊಬೈಲ್ ಕೊಡಿಸುವಂತೆ ಮಾಡುತ್ತಾನೆ. ಅದನ್ನು ಕದ್ದು ಮುಚ್ಚಿ ಶಾಲೆಗೂ ತರುತ್ತಾನೆ. ಇದನ್ನುಕಂಡ ಕಾರ್ತಿಕನಿಗೂ ಮೊಬೈಲ್ ಪಡೆಯಬೇಕು ಎಂಬ ಆಶೆಯಾಗುತ್ತದೆ. ಮೊಬೈಲ್ ಇದ್ದರೆ ಆಟ ಆಡಬಹುದು ಎಂದು ಯೋಚಿಸುತ್ತಾನೆ.

**a. i)** **ಕಾರ್ತಿಕ್ ಯೋಚಿಸುವ ರೀತಿ ಸರಿಯೇ?**
**ii)** ಏಕೆ ಕಾರಣ ತಿಳಿಸಿ.

**b. i)** **ಹರೀಶ್ ಮಾಡಿರುವುದು ಸರಿಯೇ?**
**ii)** ಏಕೆ ಕಾರಣ ತಿಳಿಸಿ.

**c. ಕಾರ್ತಿಕ್ ಮತ್ತು ಹರೀಶ್‌ಗೆ ನೀನು ಕೊಡುವ ಸಲಹೆಗಳೇನು?**